ಶ್ರೀ ಗಣೇಶ ಶಾರದ ಗುರುಭ್ಯೋ ನಮಃ

ಶ್ರೀಕ್ಷೇತ್ರ ಕೂಡಲೀ ದರ್ಶನ

ಸಮಸ್ತ ಪಾಪರಾಶಿಯನ್ನು ದಗ್ಧಮಾಡುವ, ಜೀವಜಂತುಗಳಿಗೆ ಭುಕ್ತಿ, ಮುಕ್ತಿ ನೀಡುವ, ಹರಿ ಹರರಿಗೆ ಸ್ವಗೃಹದಂತಿರುವ ಮಾತೆ ತುಂಗಭದ್ರೆಯ ಪಾದಪದ್ಮಗಳಿಗೆ ನಮಿಸುತ್ತಾ, ಶ್ರೀಕ್ಷೇತ್ರ ಕೂಡಲಿಗೆ ಸುಸ್ವಾಗತ.





ತ್ರಿಕೋಣಾಕೃತಿಯ ಕ್ಷೇತ್ರ, ಏಕಾದಶರುದ್ರ ಕ್ಷೇತ್ರ, ಸಂಗಮ ಕ್ಷೇತ್ರ, ಶ್ರೀ ಶ್ರೀ ವಿದ್ಯಾ ಅಧಿಷ್ಠಾನ ಕ್ಷೇತ್ರ.

ಶ್ರೀಚಕ್ರ ನಿವಾಸಿನಿಯೂ, ಆದಿಶಕ್ತಿ ಸ್ವರೂಪಿಣಿಯೂ, ವಿದ್ಯಾಧಿದೇವತೆಯೂ ಆದ ಶ್ರೀಶಾರದೆ ನೆಲೆಸಿರುವ ಆದಿ ಹರಿಹರ ಕ್ಷೇತ್ರ.

ಸಾಕ್ಷಾತ್ ವಿಷ್ಣು ಸ್ವರೂಪವಾದ ತುಂಗಾ, ಮಹಾದೇವ ಶಿವ ಸ್ವರೂಪವಾದ ಭದ್ರಾ ನದಿಗಳ ಸಂಗಮ ಕ್ಷೇತ್ರ.

ತುಂಗಾ ನಾರಾಯಣಃ ಸಾಕ್ಷಾತ್ ಭದ್ರಾ ದೇವೋ ಮಹೇಶ್ವರಃ ।

ತುಂಗಭದ್ರಾತ್ಮಕಂ ವಿದ್ಧಿ ಹರಿಶಂಕರಯೋರ್ವಪುಃ ॥

ವರಾಹ ವಾಮದಂಷ್ಟ್ರಾತ್ತು ತುಂಗಾ ತುಂಗಫಲಪ್ರದಾ ।

ಸಮೂದ್ಭೂತಾ ನೃಪಶ್ರೇಷ್ಠ ಭದ್ರಾ ದಕ್ಷಿಣ ದಂಷ್ಟ್ರದ ॥



ವರಾಹಮೂರ್ತಿಯ ಎಡದಾಡೆಯಿಂದ ಬಂದ ತುಂಗ, ಬಲದಾಡೆಯಿಂದ ಹುಟ್ಟಿದ ಭದ್ರಾ ನದಿಗಳ ಕೂಡಲಿ.

ವರಾಹಾವತಾರವನ್ನೆತ್ತಿದ ಶ್ರೀ ಮಹಾವಿಷ್ಣುವು ಹಿರಣ್ಯಾಕ್ಷನ ಸಂಹಾರದ ನಂತರ ಸಹ್ಯಾದ್ರಿ ಪರ್ವತ ಪ್ರದೇಶದಲ್ಲಿ ವರಾಹ ರೂಪವನ್ನು ತ್ಯಜಿಸಿ ದಿವ್ಯ ಮಂಗಳ ಭಗವದ್ರೂಪವನ್ನು ಸ್ವೀಕರಿಸಿದ ವೇದಮೂಲ ಎಂಬ ಪವಿತ್ರ ಸ್ಥಳದಲ್ಲಿ ಹುಟ್ಟಿ, ದೈವೀ ಸ್ವರೂಪವನ್ನು ಪಡೆದ ಪವಿತ್ರ ನದಿಗಳ ಸಂಗಮ ತುಂಗಭದ್ರಾ.

ತುಂಗಭದ್ರಾ ಸ್ತುತಿ

ಶ್ರೀವಿಭಾಂಡಕ ಉವಾಚ |

ವರಾಹದೇಹಸಂಭೂತೇ ಗಿರಿಜೇ ಪಾಪಭಂಜಿನಿ |

ದರ್ಶನಾನ್ಮುಕ್ತಿದೇ ದೇವಿ ಮಹಾಪಾತಕಿನಾಮಪಿ || ೧ ||

ವಾಗ್ದೇವೀ ತ್ವಂ ಮಹಾಲಕ್ಷ್ಮೀಃ ಗಿರಿಜಾಸಿ ಶಚೀ ತಥಾ |

ಪ್ರಭಾ ಸೂರ್ಯಸ್ಯ ದೇವೇಶಿ ಮರೀಚಿಸ್ತ್ವಂ ಕಲಾನಿಧೇಃ || ೨ ||



ಪರ್ಜನ್ಯಸ್ಯ ಯಥಾ ವಿದ್ಯುದ್ವಿಷ್ಣೋರ್ಮಾಯಾ ತ್ವಮೇವ ಹಿ |
ತೃಣಗುಲ್ಮಲತಾವೃಕ್ಷಾಃ ಸಿದ್ಧಾ ದೇವಾ ಉದೀರಿತಾಃ || ೩ ||
ದೃಷ್ಟ್ವಾ ಸ್ಪೃಷ್ಟ್ವಾ ತಥಾ ಪೀತಾ ವಂದಿತಾ ಚಾವಗಾಹಿತಾ |
ಮುಕ್ತಿದೇ ಪಾಪಿನಾಂ ದೇವಿ ಶತಕೃತ್ವೋ ನಮೋ ನಮಃ || ೪ ||

ಮಾಂಡವ್ಯ ಉವಾಚ |

ನಮಸ್ತೇ ತುಂಗಭದ್ರಾಯೈ ನಮಸ್ತೇ ಹರಿದೇಹಜೇ |
ನಮಸ್ತೇ ವೇದಗಿರಿಜೇ ಶ್ರೀಶೈಲಪದಭಾಜಿನಿ || ೧ ||
ವಿಷ್ಣುಮಾಯೇ ವಿಷ್ಣುರೂಪೇ ವಿಷ್ವಕ್ಸೇನಪ್ರಿಯೇಽನಘೇ |
ವಿಶ್ವಂಭರೇ ವಿಶಾಲಾಕ್ಷಿ ವಿಲಸತ್ಕೂಲಸಂಯುತೇ |
ವಿಲೋಕಯ ವಿನೋದೇನ ಕುರು ಮಾಂ ವಿಗತೈನಸಮ್ || ೨ ||
ತ್ವದ್ವಾತವೀಜಿತಾ ಭೂತಾ ವಿಮಲಾಘಾ ಭವಂತಿ ಹಿ |
ದರ್ಶನಾತ್ ಸ್ಪರ್ಶನಾತ್ ಪಾನಾದ್ವಕ್ತವ್ಯಂ ಕಿಂ ನು ವಿದ್ಯತೇ || ೩ ||
ದೃಷ್ಟ್ವಾ ಜನ್ಮಶತಂ ಪಾಪಂ ಸ್ಪೃಷ್ಟ್ವಾ ಜನ್ಮಶತತ್ರಯಮ್ |
ಪೀತ್ವಾ ಜನ್ಮಸಹಸ್ರಾಣಾಂ ಪಾಪಂ ನಾಶಯ ಮಂಗಳೇ || ೪ ||
ಪುತ್ರಾನ್ ದಾರಾನ್ ಧನಂ ಧಾನ್ಯಂ ಪಶುವಸ್ತ್ರಾಣಿ ಯೇ ನರಾಃ |
ಕಾಮಾನ್ಮಜ್ಜನಶೀಲಾಸ್ತೇ ಯಾಂತಿ ತತ್ಫಲಮಂಜಸಾ |
ಭುಕ್ತ್ವಾ ಯಾಂತಿ ಹರೇಃ ಸ್ಥಾನಂ ಯಾವದಾಚಂದ್ರತಾರಕಮ್ || ೫ ||
ಇತಿ ಬ್ರಹ್ಮಾಂಡಪುರಾಣೇ ತುಂಗಭದ್ರಾಮಾಹಾತ್ಮ್ಯೇ ಶ್ರೀತುಂಗಭದ್ರಾಸ್ತುತಿಃ |

ನದಿಗಳು ಸಂಧಿಸುವ ನಿಖರವಾದ ಬಿಂದುವನ್ನು ಸೂಚಿಸುತ್ತಿರುವ, ನಂದಿಯೊಂದಿಗಿರುವ ಶ್ರೀ ಸಂಗಮೇಶ್ವರ ದೇವಾಲಯ. ದೇವಾಲಯದ ಒಳಗೆ ಇರುವ ಒಂದು ಸಣ್ಣ ಕೊಳ. ಕೊಳದ ನೀರಿನಲ್ಲಿರುವ ಹರಿಹರರ ಪಾದ ಚಿಹ್ನೆಯ ಆಕೃತಿಗಳು. ಸಂಗಮ ಕ್ಷೇತ್ರದಲ್ಲಿ ತುಂಗಭದ್ರಾ ನದಿಗೆ ವಂದಿಸಿ, ಪವಿತ್ರ ಜಲವನ್ನು ಪ್ರೋಕ್ಷಣೆ ಮಾಡಿಕೊಂಡ ನಂತರ, ಶ್ರೀಕೂಡಲಿ ಕ್ಷೇತ್ರ ಪಾಲಕನಾದ ಶ್ರೀ ಚಿಂತಾಮಣಿ ನರಸಿಂಹನ ದರ್ಶನ. ಪರಮ ಶ್ರೇಷ್ಠ ಹರಿಭಕ್ತನಾದ ಪ್ರಹ್ಲಾದನು ಪ್ರತಿಷ್ಠಾಪಿಸಿದನೆಂದು ಖ್ಯಾತಿ ಇರುವ ದಿವ್ಯ ನರಸಿಂಹ. ಹರಿಹರ ಸಾನ್ನಿಧ್ಯದಿಂದಲೂ, ಬ್ರಹ್ಮತೀರ್ಥ, ವಿಷ್ಣು ತೀರ್ಥ ಮುಂತಾದ ಪವಿತ್ರ ತೀರ್ಥಗಳಿಂದ ಪುನೀತವಾದ

ತುಂಗಭದ್ರಾ ತೀರದಲ್ಲಿ ಪ್ರಹ್ಲಾದನು, ಶ್ರೀ ವಿಷ್ಣುವಿನ ಮೂಲ ಮಂತ್ರವನ್ನು ಗಾಲವ ಮಹರ್ಷಿಗಳಿಂದ ಉಪದೇಶ ಪಡೆದು, ದಿವ್ಯ ತಪಸ್ಸನ್ನಾಚರಿಸಿ, ಶ್ರೀನರಸಿಂಹನ ನಿಜರೂಪ ದರ್ಶನ ಪಡೆದ ಪುಣ್ಯ ಸ್ಥಳ.

ಸಾಲಿಗ್ರಾಮ ಶಿಲೆಯಿಂದ ರಚಿತವಾದ ನರಸಿಂಹ ವೀರಾಸನದಲ್ಲಿ ಕುಳಿತಿರುವ ಭವ್ಯ ಭಂಗಿ. ತುಂಗಭದ್ರಾ ಸಂಗಮ ಕ್ಷೇತ್ರದಲ್ಲಿ ಯಾರು ನಿನ್ನನ್ನು ಶ್ರದ್ಧಾ ಭಕ್ತಿಗಳಿಂದ ಸ್ಮರಿಸುತ್ತಾರೋ ಅಂತಹವರಿಗೆ ಸಂಸಾರದ ಮತ್ತು ಮೃತ್ಯು ಬಂಧನದಿಂದ ಬಿಡುಗಡೆ ಮಾಡಿ, ಶಾಂತಿ ಲಭಿಸುವಂತೆ ಮಾಡು ಎಂದು ಪ್ರಹ್ಲಾದ ನರಸಿಂಹನಲ್ಲಿ ಮೊರೆಯಿಟ್ಟ ದಿವ್ಯ ಸನ್ನಿಧಾನ. ಪ್ರಹ್ಲಾದನ ಪ್ರಾರ್ಥನೆಯಂತೆ ಭಕ್ತರ ಇಷ್ಟಾರ್ಥಗಳನ್ನು ನೆರವೇರಿಸುವ ಭರವಸೆಯನ್ನು ಕೊಟ್ಟ ವರ ಚಿಹ್ನೆಯಾಗಿ ಶ್ರೀಮೂರ್ತಿಯ ಬಲಗೈಯ್ಯಲ್ಲಿರುವ ಚಿಂತಾಮಣಿ. ವಿಶೇಷ ಶಕ್ತಿಯುತವಾದ ಶ್ರೀಚಿಂತಾಮಣಿ ನರಸಿಂಹ ಸ್ವಾಮಿಗೆ ವಂದನೆ ಸಲ್ಲಿಸುತ್ತಾ, ಪ್ರಹ್ಲಾದ ಕೃತ ನರಸಿಂಹ ಸ್ತುತಿ.

ಶ್ರೀನೃಸಿಂಹ ಸ್ತುತಿಃ (ಪ್ರಹ್ಲಾದ ಕೃತಂ)

ಪ್ರಹ್ಲಾದ ಉವಾಚ ।

ಬ್ರಹ್ಮಾದಯಃ ಸುರಗಣಾ ಮುನಯೋಥ ಸಿದ್ಧಾಃ ಸತ್ತ್ವೈಕತಾನಮತಯೋ ವಚಸಾಂ ಪ್ರವಾಹೈಃ ।
ನಾರಾಧಿತುಂ ಪುರುಗುಣೈರಧುನಾಪಿ ಪಿಪ್ರುಃ ಕಿಂ ತೋಷ್ಟುಮರ್ಹತಿ ಸ ಮೇ ಹರಿರುಗ್ರಜಾತೇಃ ॥
ಮನ್ಯೇ ಧನಾಭಿಜನರೂಪತಪಃಶ್ರುತೌಜಸ್ತೇಜಃ ಪ್ರಭಾವಬಲಪೌರುಷ ಬುದ್ಧಿಯೋಗಾಃ ।
ನಾರಾಧನಾಯ ಹಿ ಭವಂತಿ ಪರಸ್ಯ ಪುಂಸೋ ಭಕ್ತ್ಯಾ ತುತೋಷ ಭಗವಾನ್ ಗಜಯೂಥಪಾಯ ॥
ವಿಪ್ರಾದ್ದ್ವಿ ಷಡ್ಗುಣಯುತಾದರವಿಂದನಾಭಪಾದಾರವಿಂದ ವಿಮುಖಾಚ್ಛ್ವಪಚಂ ವರಿಷ್ಟಂ ।
ಮನ್ಯೇ ತದರ್ಪಿತ ಮನೋವಚನೇಹಿತಾರ್ಥಪ್ರಾಣಂ ಪುನಾತಿ ಸ ಕುಲಂ ನ ತು ಭೂರಿಮಾನಃ ॥
ನೈವಾತ್ಮನಃ ಪ್ರಭುರಯಂ ನಿಜಲಾಭಪೂರ್ಣೋ ಮಾನಂ ಜನಾದವಿದುಷಃ ಕರುಣೋ ವೃಣೀತೇ ।
ಯದ್ಯಜ್ಜನೋ ಭಗವತೇ ವಿದದೀತ ಮಾನಂ ತಚ್ಚಾತ್ಮನೇ ಪ್ರತಿಮುಖಸ್ಯ ಯಥಾ ಮುಖಶ್ರೀಃ ॥
ತಸ್ಮಾದಹಂ ವಿಗತವಿಕ್ಲವ ಈಶ್ವರಸ್ಯ ಸರ್ವಾತ್ಮನಾ ಮಹಿ ಗೃಣಾಮಿ ಯಥಾ ಮನೀಷಮ್ ।
ನೀಚೋಜಯಾ ಗುಣವಿಸರ್ಗಮನುಪ್ರವಿಷ್ಟಃ ಪೂಯೇತ ಯೇನ ಹಿ ಪುಮಾನನುವರ್ಣಿತೇನ ॥
ಸರ್ವೇ ಹ್ಯಮೀ ವಿಧಿಕರಾಸ್ತವ ಸತ್ತ್ವಧಾಮ್ನೋ ಬ್ರಹ್ಮಾದಯೋ ವಯಮಿವೇಶ ನ ಚೋದ್ವಿಜಂತಃ ।
ಕ್ಷೇಮಾಯ ಭೂತಯ ಉತಾತ್ಮಸುಖಾಯ ಚಾಸ್ಯ ವಿಕ್ರೀಡಿತಂ ಭಗವತೋ ರುಚಿರಾವತಾರೈಃ ॥
ತದ್ಯಚ್ಛ ಮನ್ಯುಮಸುರಶ್ಚ ಹತಸ್ತ್ವಯಾದ್ಯ ಮೋದೇತ ಸಾಧುರಪಿ ವೃಶ್ಚಿಕಸರ್ಪಹತ್ಯಾ ।
ಲೋಕಾಶ್ಚನಿರ್ವೃತಿಮಿತಾಃ ಪ್ರತಿಯಂತಿ ಸರ್ವೇ ರೂಪಂ ನೃಸಿಂಹ ವಿಭಯಾಯ ಜನಾಃ ಸ್ಮರಂತಿ ॥

ನಾಹಂ ಬಿಭೇಮ್ಯಜಿತ ತೇತಿಭಯಾನಕಾಸ್ಯಜಿಹ್ವಾರ್ಕನೇತ್ರಭ್ರುಕುಟೀರಭಸೋಗ್ರದಂಷ್ಟ್ರಾತ್ ।
ಆಂತ್ರಸ್ರಜಃ ಕ್ಷತಜಕೇಸರಶಂಕುಕರ್ಣಾನ್ನಿರ್ಹ್ರಾದಭೀತದಿಗಿಭಾದರಿಭಿನ್ನಖಾಗ್ರಾತ್ ॥
ತ್ರಸ್ತೋಸ್ಮ್ಯಹಂ ಕೃಪಣವತ್ಸಲ ದುಃಸಹೋಗ್ರಸಂಸಾರಚಕ್ರಕದನಾದ್ಗ್ರಸತಾಂ ಪ್ರಣೀತಃ ।
ಬದ್ಧಃ ಸ್ವಕರ್ಮಭಿರುಶತ್ತಮ ತೇಂಘ್ರಿಮೂಲಂ ಪ್ರೀತೋಪವರ್ಗಶರಣಂ ಹ್ವಯಸೇ ಕದಾ ನು ॥
ಯಸ್ಮಾತ್ ಪ್ರಿಯಾಪ್ರಿಯವಿಯೋಗಸಯೋಗಜನ್ಮಶೋಕಾಗ್ನಿನಾ ಸಕಲಯೋನಿಷು ದಹ್ಯಮಾನಃ ।
ದುಃಖೌಷದಂ ತದಪಿ ದುಃಖಮತದ್ಧಿಯಾಹಂ ಭೂಮನ್ ಭ್ರಮಾಮಿ ವದಮೇ ತವದಾಸ್ಯಯೋಗಮ್ ॥
ಸೋಹಂ ಪ್ರಿಯಸ್ಯ ಸುಹೃದಃ ಪರದೇವತಾಯಾ ಲೀಲಾಕಥಾಸ್ತವ ನೃಸಿಂಹ ವಿರಿಂಚಿಗೀತಾಃ ।
ಅಂಜಸ್ತಿತರ್ಮ್ಯನುಗೃಣನ್ ಗುಣವಿಪ್ರಮುಕ್ತೋ ದುರ್ಗಾಣಿ ತೇ ಪದಯುಗಾಲಯಹಂಸಸಂಗಃ ॥
ಬಾಲಸ್ಯ ನೇಹ ಶರಣಂ ಪಿತರೌ ನೃಸಿಂಹ ನಾರ್ತಸ್ಯ ಚಾಗದಮುದನ್ವತಿ ಮಜ್ಜತೋ ನೌಃ ।
ತಪ್ತಸ್ಯ ತತ್ಪ್ರತಿವಿಧಿರ್ಯ ಇಹಾಂಜಸೇಷ್ಟಸ್ತಾವದ್ವಿಭೋ ತನುಭೃತಾಂ ತ್ವದುಪೇಕ್ಷಿತಾನಾಮ್ ॥
ಯಸ್ಮಿನ್ಯತೋ ಯರ್ಹಿ ಯೇನ ಚ ಯಸ್ಯ ಯಸ್ಮಾದ್ಯಸ್ಮೈ ಯಥಾ ಯದುತ ಯಸ್ತ್ವಪರಃ ಪರೋವಾ ।
ಭಾವಃ ಕರೋತಿ ವಿಕರೋತಿ ಪೃಥಕ್ ಸ್ವಭಾವಃ ಸಂಚೋದಿತಸ್ತದಖಿಲಂ ಭವತಃ ಸ್ವರೂಪಮ್ ॥
ಮಾಯಾ ಮನಃ ಸೃಜತಿ ಕರ್ಮಮಯಂ ಬಲೀಯಃ ಕಾಲೇನ ಚೋದಿತಗುಣಾನುಮತೇನ ಪುಂಸಃ ।
ಛಂದೋಮಯಂ ಯದಜಯಾರ್ಪಿತಷೋಡಶಾರಂ ಸಂಸಾರಚಕ್ರಮಜ ಕೋತಿತರೇತ್ ತ್ವದನ್ಯಃ ॥
ಸ ತ್ವಂ ಹಿ ನಿತ್ಯವಿಜಿತಾತ್ಮಗುಣಃ ಸ್ವಧಾಮ್ನಾ ಕಾಲೋ ವಶೀಕೃತವಿಸೃಜ್ಯ ವಿಸರ್ಗಶಕ್ತಿಃ ।
ಚಕ್ರೇ ವಿಸೃಷ್ಟಮಜಯೇಶ್ವರ ಷೋಡಶಾರೇ ನಿಷ್ಪೀಡ್ಯಮಾನಮುಪಕರ್ಷ ವಿಭೋ ಪ್ರಪನ್ನಮ್ ॥
ದೃಷ್ಟಾಮಯಾ ದಿವಿ ವಿಭೋಖಿಲಧಿಷ್ಣ್ಯಪಾನಾಮಾಯುಃ ಶ್ರಿಯೋವಿಭವ ಇಚ್ಛತಿ ಯಾಂಜನೋಯಂ।
ಯೇಸ್ಮತ್ಪಿತುಃ ಕುಪಿತಹಾಸವಿಜೃಂಭಿತಭ್ರೂವಿಸ್ಫೂರ್ಜಿತೇನ ಲುಲಿತಾಃ ಸ ತು ತೇ ನಿರಸ್ತಃ ॥
ತಸ್ಮಾದಮೂಸ್ತನುಭೃತಾಮಹಮಾಶಿಷೋಜ್ಞ ಆಯುಃ ಶ್ರಿಯಂ ವಿಭವಮೈಂದ್ರಿಯಮಾವಿರಿಂಚಾತ್ ।
ನೇಚ್ಛಾಮಿತೇ ವಿಲುಲಿತಾನುರುವಿಕ್ರಮೇಣ ಕಾಲಾತ್ಮನೋಪನಯ ಮಾಂ ನಿಜಭೃತ್ಯಪಾರ್ಶ್ವಮ್ ॥
ಕುತ್ರಾಶಿಷಃ ಶ್ರುತಿಸುಖಾ ಮೃಗತೃಷ್ಣರೂಪಾಃ ಕ್ವೇದಂ ಕಲೇವರಮಶೇಷರುಜಾಂ ವಿರೋಹಃ ।
ನಿರ್ವಿದ್ಯತೇ ನತುಜನೋ ಯದಪೀತಿ ವಿದ್ವಾನ್ ಕಾಮಾನಲಂ ಮಧುಲವೈಃ ಶಮಯನ್ ದುರಾಪೈಃ॥
ಕ್ವಾಹಂ ರಜಃಪ್ರಭವ ಈಶ ತಮೋಧಿಕೇಸ್ಮಿನ್ ಜಾತಃ ಸುರೇತರಕುಲೇ ಕ್ವ ತವಾನುಕಂಪಾ ।
ನ ಬ್ರಹ್ಮಣೋ ನ ತು ಭವಸ್ಯ ನ ವೈ ರಮಾಯಾ ಯನ್ಮೇರ್ಪಿತಃ ಶಿರಸಿ ಪದ್ಮಕರಃ ಪ್ರಸಾದಃ ॥
ನೈಷಾ ಪರಾವರಮತಿರ್ಭವತೋ ನನು ಸ್ಯಾಜ್ಜಂತೋರ್ಯಥಾತ್ಮಸುಹೃದೋ ಜಗತಸ್ತಥಾಪಿ ।

ಸಂಸೇವಯಾ ಸುರತರೋರಿವ ತೇ ಪ್ರಸಾದಃ ಸೇವಾನುರೂಪಮುದಯೋ ನ ಪರಾವರತ್ವಮ್ ॥

ಏವಂ ಜನಂ ನಿಪತಿತಂ ಪ್ರಭವಾಹಿಕೂಪೇ ಕಾಮಾಭಿಕಾಮಮನು ಯಃ ಪ್ರಪತನ್ ಪ್ರಸಂಗಾತ್ ।

ಕೃತ್ವಾತ್ಮಸಾತ್ಸುರರ್ಷಿಣಾ ಭಗವನ್ ಗೃಹೀತಃ ಸೋಹಂ ಕಥಂ ನು ವಿಸೃಜೇ ತವ ಭೃತ್ಯಸೇವಾಮ್ ॥

ಮತ್ಪ್ರಾಣರಕ್ಷಣಮನಂತ ಪಿತುರ್ವಧಶ್ಚ ಮನ್ಯೇ ಸ್ವಭೃತ್ಯ ಋಷಿವಾಕ್ಯಮೃತಂ ವಿಧಾತುಮ್ ।

ಖಡ್ಗಂ ಪ್ರಗೃಹ್ಯ ಯದವೋಚದಸದ್ವಿಧಿತ್ಸುಸ್ತ್ವಾ ಮೀಶ್ವರೋ ಮದಪರೋವತು ಕಂ ಹರಾಮಿ ॥

ಏಕಸ್ತ್ವಮೇವ ಜಗದೇತದಮುಷ್ಯ ಯತ್ತ್ವಮಾದ್ಯಂತಯೋಃ ಪೃಥಗವಸ್ಯಸಿ ಮಧ್ಯತಶ್ಚ ।

ಸೃಷ್ಟ್ವಾ ಗುಣವ್ಯತಿಕರಂ ನಿಜಮಾಯಯೇದಂ ನಾನೇವ ತೈರವಸಿತಸ್ತದನುಪ್ರವಿಷ್ಟಃ ॥

ತ್ವಂವಾ ಇದಂ ಸದಸದೀಶ ಭವಾಂಸ್ತತೋನ್ಯೋ ಮಾಯಾಯದಾತ್ಮಪರಬುದ್ಧಿರಿಯಂ ಹ್ಯಪಾರ್ಥಾ ।

ಯದ್ಯಸ್ಯ ಜನ್ಮ ನಿಧನಂ ಸ್ಥಿತಿರೀಕ್ಷಣಂ ಚ ತದ್ವೈತದೇವ ವಸುಕಾಲವದುಷ್ಟಿತರ್ವೋಃ ॥

ನ್ಯಸ್ಯೇದಮಾತ್ಮನಿ ಜಗದ್ವಿಲಯಾಂಬುಮಧ್ಯೇ ಶೇಷೇತ್ಮನಾ ನಿಜಸುಖಾನುಭವೋ ನಿರೀಹಃ ।

ಯೋಗೇನ ಮೀಲಿತದೃಗಾತ್ಮನಿಪೀತನಿದ್ರಸ್ತುರ್ಯೇ ಸ್ಥಿತೋ ನತು ತಮೋ ನ ಗುಣಾಂಶ್ಚ ಯುಂಕ್ಷೇ ॥

ತಸ್ಯೈವ ತೇ ವಪುರಿದಂ ನಿಜಕಾಲಶಕ್ತ್ಯಾ ಸಂಚೋದಿತಪ್ರಕೃತಿಧರ್ಮಣ ಆತ್ಮಗೂಢಮ್ ।

ಅಂಭಸ್ಯನಂತಶಯನಾದ್ವಿರಮತ್ಸಮಾಧೇರ್ನಾಭೇರಭೂತ್ ಸ್ವಕಣಿಕಾದ್ವಟವನ್ಮಹಾಬ್ಜಮ್ ॥

ತತ್ಸಂಭವಃ ಕವಿರತೋನ್ಯದಪಶ್ಯಮಾನಸ್ತ್ವಾಂ ಬೀಜಮಾತ್ಮನಿ ತತಂ ಸ್ವಬಹಿರ್ವಿಚಿಂತ್ಯ ।

ನಾವಿಂದದಬ್ದಶತಮಪ್ಸು ನಿಮಜ್ಜಮಾನೋ ಜಾತೇಂಕುರೇ ಕಥಮುಹೋಪಲಭೇತ ಭೀಜಮ್ ॥

ಸ ತ್ವಾತ್ಮಯೋನಿರತಿವಿಸ್ಮಿತ ಆಸ್ಥಿತೋಬ್ಜಂ ಕಾಲೇನ ತೀವ್ರತಪಸಾ ಪರಿಶುದ್ಧಭಾವಃ ।

ತ್ವಾಮಾತ್ಮನೀಶ ಭುವಿ ಗಂಧಮಿವಾತಿಸೂಕ್ಷ್ಮಂ ಭೂತೇಂದ್ರಿಯಾಶಯಮಯೇ ವಿತತಂ ದದರ್ಶ ॥

ಏವಂ ಸಹಸ್ರವದನಾಂಘ್ರಿಶಿರಃ ಕರೋರುನಾಸಾಸ್ಯಕರ್ಣನಯನಾಭರಣಾಯುಧಾಢ್ಯಮ್ ।

ಮಾಯಾಮಯಂ ಸದುಪಲಕ್ಷಿತಸನ್ನಿವೇಶಂ ದೃಷ್ಟ್ವಾ ಮಹಾಪುರುಷಮಾಪ ಮುದಂ ವಿರಿಂಚಃ ॥

ತಸ್ಮೈ ಭವಾನ್ ಹಯಶಿರಸ್ತನುವಂ ಚ ಬಿಭ್ರದ್ವೇದದ್ರುಹಾವತಿಬಲೌ ಮಧುಕೈಟಭಾಖ್ಯೌ ।

ಹತ್ವಾನಯಚ್ಛ್ರುತಿಗಣಾಂಸ್ತು ರಜಸ್ತಮಶ್ಚ ಸತ್ತ್ವಂ ತವ ಪ್ರಿಯತಮಾಂ ತನುಮಾಮನಂತಿ ॥

ಇತ್ಥಂ ನೃತಿರ್ಯಗೃಷಿದೇವಝುಷಾವತಾರೈರ್ಲೋಕಾನ್ ವಿಭಾವಯಸಿ ಹಂಸಿ ಜಗತ್ಪ್ರತೀಪಾನ್ ।

ಧರ್ಮಂ ಮಹಾಪುರುಷ ಪಾಸಿ ಯುಗಾನುವೃತ್ತಂ ಛನ್ನಃ ಕಲೌ ಯದಭವಸ್ತ್ರಿಯುಗೋಥ ಸ ತ್ವಮ್ ॥

ನೈತನ್ಮನಸ್ತವ ಕಥಾಸು ವಿಕುಂಠನಾಥ ಸಂಪ್ರೀಯತೇ ದುರಿತದುಷ್ಟಮಸಾಧು ತೀವ್ರಮ್ ।

ಕಾಮಾತುರಂ ಹರ್ಷಶೋಕಭಯೈಷಣಾರ್ತಂ ತಸ್ಮಿನ್ಕಥಂ ತವ ಗತಿಂ ವಿಮೃಶಾಮಿ ದೀನಃ ॥

ಜಿಹ್ವೈಕತೋಽಚ್ಯುತ ವಿಕರ್ಷತಿ ಮಾವಿತೃಪ್ತಾ ಶಿಶ್ನೋಽನ್ಯತಸ್ತ್ವಗುದರಂ ಶ್ರವಣಂ ಕುತಶ್ಚಿತ್ ।
ಘ್ರಾಣೋಽನ್ಯತಶ್ಚಪಲದೃಕ್ ಕ್ವ ಚ ಕರ್ಮಶಕ್ತಿರ್ಬಹ್ವ್ಯಃ ಸಪತ್ನ್ಯ ಇವ ಗೇಹಪತಿಂ ಲುನಂತಿ ॥
ಏವಂ ಸ್ವಕರ್ಮಪತಿತಂ ಭವವೈತರಣ್ಯಾಮನ್ಯೋಽನ್ಯಜನ್ಮಮರಣಾಶನಭೀತಭೀತಮ್ ।
ಪಶ್ಯಂಜನಂ ಸ್ವಪರವಿಗ್ರಹವೈರಮೈತ್ರಂ ಹಂತೇತಿ ಪಾರಚರ ಪೀಪೃಹಿ ಮೂಢಮದ್ಯ ॥
ಕೋ ನ್ವತ್ರ ತೇಽಖಿಲಗುರೋ ಭಗವನ್ ಪ್ರಯಾಸ ಉತ್ತಾರಣೇಽಸ್ಯ ಭವಸಂಭವಲೋಪಹೇತೋಃ ।
ಮೂಢೇಷು ವೈ ಮಹದನುಗ್ರಹ ಆರ್ತಬಂಧೋ ಕಿಂ ತೇನ ತೇ ಪ್ರಿಯಜನಾನನುಸೇವತಾಂ ನಃ ॥
ನೈವೋದ್ವಿಜೇ ಪರ ದುರತ್ಯಯವೈತರಣ್ಯಾಸ್ತ್ವದ್ವೀರ್ಯಗಾಯನಮಹಾಮೃತಮಗ್ನಚಿತ್ತಃ ।
ಶೋಚೇತತೋಽವಿಮುಖಚೇತಸಇಂದ್ರಿಯಾರ್ಥಮಾಯಾಸುಖಾಯಭರಮುದ್ವಹತೋಽವಿಮೂಢಾನ್॥
ಪ್ರಾಯೇಣ ದೇವ ಮುನಯಃ ಸ್ವವಿಮುಕ್ತಿಕಾಮಾ ಮೌನಂ ಚರಂತಿ ವಿಜನೇ ನ ಪರಾರ್ಥನಿಷ್ಠಾಃ ।
ನೈತಾನ್ವಿಹಾಯ ಕೃಪಣಾನ್ವಿಮುಮುಕ್ಷ ಏಕೋ ನಾನ್ಯಂ ತ್ವದಸ್ಯ ಶರಣಂ ಭ್ರಮತೋಽನುಪಶ್ಯೇ ॥
ಯನ್ಮೈಥುನಾದಿ ಗೃಹಮೇಧಿಸುಖಂ ಹಿ ತುಚ್ಛಂ ಕಂಡುಯನೇನ ಕರಯೋರಿವ ದುಃಖದುಃಖಂ ।
ತೃಪ್ಯಂತಿ ನೇಹ ಕೃಪಣಾ ಬಹುದುಃಖಭಾಜಃ ಕಂಡೂತಿವನ್ಮನಸಿಜಂ ವಿಷಹೇತ ಧೀರಃ ॥
ಮೌನವ್ರತಶ್ರುತತಪೋಽಧ್ಯಯನ ಸ್ವಧರ್ಮವ್ಯಾಖ್ಯಾರಹೋಜಪಸಮಾಧಯ ಆಪವರ್ಗ್ಯಾಃ ।
ಪ್ರಾಯಃ ಪರಂಪುರುಷತೇತ್ವಜಿತೇಂದ್ರಿಯಾಣಾಂ ವಾರ್ತಾ ಭವಂತ್ಯುತ ನವಾತ್ರತುದಾಂಭಿಕಾನಾಂ॥
ರೂಪೇ ಇಮೇ ಸದಸತೀ ತವ ವೇದಸೃಷ್ಟೇ ಬೀಜಾಂಕುರಾವಿವ ನ ಚಾನ್ಯದರೂಪಕಸ್ಯ ।
ಯುಕ್ತಾಃ ಸಮಕ್ಷಮುಭಯತ್ರ ವಿಚಿನ್ವತೇ ತ್ವಾಂ ಯೋಗೇನ ವಹ್ನಿಮಿವ ದಾರುಷು ನಾನ್ಯತಃ ಸ್ಯಾತ್ ॥
ತ್ವಂ ವಾಯುರಗ್ನಿರವನಿರ್ವಿಯದಂಬುಮಾತ್ರಾಃ ಪ್ರಾಣೇಂದ್ರಿಯಾಣಿ ಹೃದಯಂ ಚಿದನುಗ್ರಹಶ್ಚ ।
ಸರ್ವಂ ತ್ವಮೇವ ಸಗುಣೋ ವಿಗುಣಶ್ಚ ಭೂಮನ್ ನಾನ್ಯತ್ತ್ವದಸ್ತ್ಯಪಿ ಮನೋವಚಸಾ ನಿರುಕ್ತಂ ॥
ನೈತೇ ಗುಣಾ ನಗುಣಿನೋ ಮಹದಾದಯೋ ಯೇ ಸರ್ವೇ ಮನಃಪ್ರಭೃತಯಃ ಸಹದೇವಮರ್ತ್ಯಾಃ ।
ಆದ್ಯಂತವಂತ ಉರುಗಾಯ ವಿದಂತಿ ಹಿ ತ್ವಾಮೇವಂ ವಿಮೃಷ್ಯ ಸುಧಿಯೋ ವಿರಮಂತಿ ಶಬ್ದಾತ್ ॥
ತತ್ತೇಽಮಹತ್ತಮ ನಮಃ ಸ್ತುತಿಕರ್ಮಪೂಜಾಃ ಕರ್ಮ ಸ್ಮೃತಿಶ್ಚರಣಯೋಃ ಶ್ರವಣಂ ಕಥಾಯಾಂ ।
ಸಂಸೇವಯಾ ತ್ವಯಿ ವಿನೇತಿ ಷಡಂಗಯಾ ಕಿಂ ಭಕ್ತಿಂ ಜನಃ ಪರಮಹಂಸಗತೌ ಲಭೇತ ॥
ನಾರದ ಉವಾಚ –
ಏತಾವದ್ವರ್ಣಿತಗುಣೋ ಭಕ್ತ್ಯಾ ಭಕ್ತೇನ ನಿರ್ಗುಣಃ ।
ಪ್ರಹ್ಲಾದಂ ಪ್ರಣತಂ ಪ್ರೀತೋ ಯತಮನ್ಯುರಭಾಷತ ॥

ಶ್ರೀಭಗವಾನುವಾಚ –

ಪ್ರಹ್ಲಾದ ಭದ್ರ ಭದ್ರಂ ತೇ ಪ್ರೀತೋಽಹಂ ತೇಽಸುರೋತ್ತಮ ।

ವರಂ ವೃಣೀಷ್ವಾಭಿಮತಂ ಕಾಮಪೂರೋಽಸ್ಮ್ಯಹಂ ನೃಣಾಮ್ ॥

ಮಾಮಪ್ರೀಣತ ಆಯುಷ್ಮನ್ ದರ್ಶನಂ ದುರ್ಲಭಂ ಹಿ ಮೇ ।

ದೃಷ್ಟ್ವಾ ಮಾಂ ನ ಪುನರ್ಜನ್ತುರಾತ್ಮಾನಂ ತಪ್ತುಮರ್ಹತಿ ॥

ಪ್ರೀಣನ್ತಿ ಹ್ಯಥ ಮಾಂ ಧೀರಾಸ್ಸರ್ವಭಾವೇನ ಸಾಧವಃ ।

ಶ್ರೇಯಸ್ಕಾಮಾ ಮಹಾಭಾಗಾಸ್ಸರ್ವಾಸಾಮಾಶಿಷಾಂ ಪತಿಮ್ ॥

ಶ್ರೀ ನಾರದ ಉವಾಚ –

ಏವಂ ಪ್ರಲೋಭ್ಯಮಾನೋಽಪಿ ವರೈರ್ಲೋಕಪ್ರಲೋಭನೈಃ ।

ಏಕಾನ್ತಿತ್ವಾದ್ಭಗವತಿ ನೈಚ್ಛತ್ತಾನಸುರೋತ್ತಮಃ ॥

ಇತಿ ಶ್ರೀಮದ್ಭಾಗವತಪುರಾಣೇ ಸಪ್ತಮಸ್ಕಂಧೇನವಮೋಽಧ್ಯಾಯೇ ಪ್ರಹ್ಲಾದಕೃತ ಶ್ರೀನೃಸಿಂಹ ಸ್ತುತಿಃ।

ಶ್ರೀಮದ್ ಜಗದ್ಗುರು ಕೂಡಲಿ ಶೃಂಗೇರಿ ಶಂಕರಾಚಾರ್ಯ ಮಹಾಸಂಸ್ಥಾನಮ್

ದಕ್ಷಿಣಾಮ್ನಾಯ ಮೂಲ ಶ್ರೀಶಾರದಾ ಪೀಠಮ್




ಶೃಂಗೇರಿಗೆ ಹೋಗುವ ಮಾರ್ಗದಲ್ಲಿ ಶ್ರೀ ಶಂಕರಾಚಾರ್ಯರಿಂದ ಶ್ರೀಚಕ್ರ ಸ್ಥಾಪಿಸಿ ಪೂಜಿಸಲ್ಪಟ್ಟ ದಿವ್ಯ ಕ್ಷೇತ್ರ. ಶ್ರೀ ಶ್ರೀವಿದ್ಯಾ ಮೂಲಮಂತ್ರ ನಿರಂತರ ಅನುಷ್ಠಾನ ಮಾಡಲ್ಪಡುವ ಸಂಸ್ಥಾನ, ಶ್ರೀ ಶ್ರೀವಿದ್ಯೋಪಾಸಕರಾಗಿದ್ದ ಶ್ರೀ ಶ್ರೀ ಪ್ರಥಮ ನರಸಿಂಹ ಭಾರತಿ ಸ್ವಾಮಿಗಳಿಂದ ಶ್ರೀ ವಿದ್ಯಾಗಣಪತಿ, ಶ್ರೀ ಶ್ರೀ ವಿದ್ಯಾಶಂಕರೀ ಸಹಿತನಾದ ಶ್ರೀ ಶ್ರೀ ವಿದ್ಯಾಶಂಕರನನ್ನು ಪ್ರತಿಷ್ಠಾಪಿಸಲ್ಪಟ್ಟ ಜಾಗ್ರತ ಸ್ಥಳ.






ಪೀಠಾಧಿಪತಿಗಳು ಮತ್ತು ಕಿರಿಯ ಪೀಠಾಧಿಪತಿಗಳಿಂದ ಮಾಡಲ್ಪಡುತ್ತಿದ್ದ ರುದ್ರಾಭಿಷೇಕದ ದರ್ಶನ. ಇಪ್ಪತ್ತೈದು ಪೀಠಾಧಿಪತಿಗಳಿಂದ ಅವಿಚ್ಛಿನ್ನವಾಗಿ ಮುಂದುವರಿಯುತ್ತಾ ಬಂದಿರುವ ಕೈಂಕರ್ಯ.

ಭವ್ಯವಾದ ಸಿಂಹಾಸನದ ಮುಂದೆ ವಿರಾಜಿಸುತ್ತಿರುವ ಗುರುಪಾದುಕಾ ದರ್ಶನ. ಗುರು ಶ್ರೀಚರಣಗಳೇ ನಮ್ಮ ಸಂಪತ್ತು, ಭವ ಬಂಧನ ನಾಶಕ, ಪಾಪದೋಷಹರ. ಅಜ್ಞಾನದ ಕತ್ತಲೆಯನ್ನು ಪರಿಹರಿಸುವ ಗುರುಚರಣಗಳಿಗೆ ವಂದಿಸುತ್ತಾ, ಶ್ರೀ ಗುರು ಪಾದುಕಾ ಸ್ತೋತ್ರ.





ಶ್ರೀಗುರುಪಾದುಕಾ ಸ್ತೋತ್ರಮ್

ಅನಂತಸಂಸಾರ ಸಮುದ್ರತಾರ ನೌಕಾಯಿತಾಭ್ಯಾಂ ಗುರುಭಕ್ತಿದಾಭ್ಯಾಮ್ |

ವೈರಾಗ್ಯಸಾಮ್ರಾಜ್ಯದಪೂಜನಾಭ್ಯಾಂ ನಮೋ ನಮಃ ಶ್ರೀಗುರುಪಾದುಕಾಭ್ಯಾಮ್ ll 1 ||

ಕವಿತ್ವವಾರಾಶಿನಿಶಾಕರಾಭ್ಯಾಂ ದೌರ್ಭಾಗ್ಯದಾವಾಂ ಬುದಮಾಲಿಕಾಭ್ಯಾಮ್ |

ದೂರಿಕೃತಾನಮ್ರ ವಿಪತ್ತತಿಭ್ಯಾಂ ನಮೋ ನಮಃ ಶ್ರೀಗುರುಪಾದುಕಾಭ್ಯಾಮ್ ll 2 ||

ನತಾ ಯಯೋಃ ಶ್ರೀಪತಿತಾಂ ಸಮೀಯುಃ ಕದಾಚಿದಪ್ಯಾಶು ದರಿದ್ರವರ್ಯಾಃ |

ಮೂಕಾಶ್ಚ ವಾಚಸ್ಪತಿತಾಂ ಹಿ ತಾಭ್ಯಾಂ ನಮೋ ನಮಃ ಶ್ರೀಗುರುಪಾದುಕಾಭ್ಯಾಮ್ ll 3 ||

ನಾಲೀಕನೀಕಾಶ ಪದಾಹೃತಾಭ್ಯಾಂ ನಾನಾವಿಮೋಹಾದಿ ನಿವಾರಿಕಾಭ್ಯಾಂ |
ನಮಜ್ಜನಾಭೀಷ್ಟತತಿಪ್ರದಾಭ್ಯಾಂ ನಮೋ ನಮಃ ಶ್ರೀಗುರುಪಾದುಕಾಭ್ಯಾಮ್ ॥ 4 ॥
ನೃಪಾಲಿ ಮೌಲಿವ್ರಜರತ್ನಕಾಂತಿ ಸರಿದ್ವಿರಾಜತ್ ಝುಷಕನ್ಯಕಾಭ್ಯಾಂ |
ನೃಪತ್ವದಾಭ್ಯಾಂ ನತಲೋಕಪಂಕತೇ: ನಮೋ ನಮಃ ಶ್ರೀಗುರುಪಾದುಕಾಭ್ಯಾಮ್ ॥ 5 ॥
ಪಾಪಾಂಧಕಾರಾರ್ಕ ಪರಂಪರಾಭ್ಯಾಂ ತಾಪತ್ರಯಾಹೀಂದ್ರ ಖಗೇಶ್ವರಾಭ್ಯಾಂ |
ಜಾಡ್ಯಾಬ್ಧಿ ಸಂಶೋಷಣ ವಾಡವಾಭ್ಯಾಂ ನಮೋ ನಮಃ ಶ್ರೀಗುರುಪಾದುಕಾಭ್ಯಾಮ್ ॥ 6 ॥
ಶಮಾದಿಷಟ್ಕ ಪ್ರದವೈಭವಾಭ್ಯಾಂ ಸಮಾಧಿದಾನ ವ್ರತದೀಕ್ಷಿತಾಭ್ಯಾಂ |
ರಮಾಧವಾಂಧ್ರಿಸ್ಥಿರಭಕ್ತಿದಾಭ್ಯಾಂ ನಮೋ ನಮಃ ಶ್ರೀಗುರುಪಾದುಕಾಭ್ಯಾಮ್ ॥ 7 ॥
ಸ್ವಾರ್ಚಾಪರಾಣಾಂ ಅಖಿಲೇಷ್ಟದಾಭ್ಯಾಂ ಸ್ವಾಹಾಸಹಾಯಾಕ್ಷಧುರಂಧರಾಭ್ಯಾಂ |
ಸ್ವಾಂತಾಚ್ಛಭಾವಪ್ರದಪೂಜನಾಭ್ಯಾಂ ನಮೋ ನಮಃ ಶ್ರೀಗುರುಪಾದುಕಾಭ್ಯಾಮ್ ॥ 8 ॥
ಕಾಮಾದಿಸರ್ಪ ವ್ರಜಗಾರುಡಾಭ್ಯಾಂ ವಿವೇಕವೈರಾಗ್ಯ ನಿಧಿಪ್ರದಾಭ್ಯಾಂ |
ಬೋಧಪ್ರದಾಭ್ಯಾಂ ದೃತಮೋಕ್ಷದಾಭ್ಯಾಂ ನಮೋ ನಮಃ ಶ್ರೀಗುರುಪಾದುಕಾಭ್ಯಾಮ್ ॥ 9 ॥
ಇತಿ ಶ್ರೀ ಗುರು ಪಾದುಕಾ ಸ್ತೋತ್ರಮ್ ||

ಶ್ರೀ ಶಾರದೆಯನ್ನು ಶ್ರೀ ಕೂಡಲೀ ಕ್ಷೇತ್ರದಲ್ಲಿ ಶ್ರೀ ಶಂಕರಾಚಾರ್ಯರೇ ಶ್ರೀ ಚಕ್ರದಲ್ಲಿ ಸ್ಥಾಪಿಸಿರುವ ಹಿನ್ನೆಲೆ.

ಶ್ರೀ ಶಂಕರ ಭಗವತ್ಪಾದರು ಬ್ರಹ್ಮನ ಅವತಾರವಾದ ಮಂಡನ ಮಿಶ್ರರನ್ನು ವಾದದಲ್ಲಿ ಸೋಲಿಸಿದ ನಂತರ, ಮಂಡನ ಮಿಶ್ರರು, ವಾದದ ಒಪ್ಪಂದದಂತೆ, ಆಚಾರ್ಯರ ಶಿಷ್ಯರಾಗಿ ಸನ್ಯಾಸ ದೀಕ್ಷೆಯನ್ನು ಸ್ವೀಕರಿಸಿ, ಸುರೇಶ್ವರಾಚಾರ್ಯರೆಂಬ ಹೆಸರನ್ನು ಪಡೆದು, ಅದ್ವೈತ ಸಿದ್ಧಾಂತವನ್ನು ಸಂಪೂರ್ಣ ಭಾರತದಲ್ಲಿ ಜನರಿಗೆ ಬೋಧಿಸಿ, ವೈದಿಕ ಧರ್ಮವು ನಮ್ಮ ನಾಡಿನಲ್ಲಿ ಶಾಶ್ವತವಾಗಿ ನೆಲೆಸುವಂತೆ ಮಾಡಿದರು.

ಮಂಡನ ಮಿಶ್ರರ ಪತ್ನಿ, ಸರಸ್ವತಿಯ ಅವತಾರ ಉಭಯ ಭಾರತಿಯು ತನ್ನ ನಿಜರೂಪವನ್ನು ಪಡೆದು ಬ್ರಹ್ಮಲೋಕಕ್ಕೆ ಹೋಗಲು ಸಿದ್ಧಳಾದಾಗ, ಶ್ರೀ ಶಂಕರ ಭಗವತ್ಪಾದರು, ಅವಳನ್ನು ಶ್ರೀ ವನದುರ್ಗಾ ಮಂತ್ರದಿಂದ ಪ್ರಾರ್ಥಿಸಿ, ತಾವು ದಕ್ಷಿಣದ ಶೃಂಗೇರಿಯಲ್ಲಿ ಸ್ಥಾಪಿಸಲು ಉದ್ದೇಶಿಸಿರುವ ದಕ್ಷಿಣಾಮ್ನಾಯ ಪೀಠದಲ್ಲಿ ನೆಲೆಸುವಂತೆ ಕೇಳಿಕೊಂಡರು.

ಇದಕ್ಕೆ ಒಪ್ಪಿದ ಶಾರದೆಯು "ನಾನು ನಿಮ್ಮನ್ನು ಅನುಸರಿಸಿ ಬರುತ್ತನೆ. ನೀವು ನನ್ನನ್ನು ಹಿಂತಿರುಗಿ ನೋಡಬಾರದು. ಹಾಗೆ ನೋಡಿದ್ದಲ್ಲಿ, ನೋಡಿದ ಸ್ಥಳದಲ್ಲಿಯೇ ನಾನು ನೆಲೆನಿಲ್ಲುತ್ತೇನೆ" ಎಂದಳು. ಶ್ರೀ

ಶಂಕರರು ಸಮ್ಮತಿಸಿ, ದಕ್ಷಿಣದ ಕಡೆಗೆ ನಡೆದರು. ಶ್ರೀ ಶಾರದೆಯು ಅವರನ್ನು ದಿವ್ಯ ತೇಜೋರೂಪದಲ್ಲಿ ಮತ್ತು ಕಾಲಂದುಗೆಯ ಶಬ್ದದ ರೂಪದಲ್ಲಿ ಹಿಂಬಾಲಿಸಿದಳು. ತುಂಗಭದ್ರಾ ಸಂಗಮದ ಬಳಿ ಬಂದಾಗ, ಶ್ರೀ ಶಾರದೆಯ ಕಾಲಿನ ಕಾಲಂದಿಗೆಯ ಶಬ್ದವು ಕೇಳಿಸದಂತಾಯಿತು. ಆಗ ಆತಂಕಗೊಂಡ ಶ್ರೀಶಂಕರಾಚಾರ್ಯರು ಹಿಂದಿರುಗಿ ನೋಡಿದರು. ಶ್ರೀಶಾರದೆಯು ತನ್ನ ಕರಾರಿನಂತೆ ಶ್ರೀಕೂಡಲೀ ಕ್ಷೇತ್ರದಲ್ಲಿಯೇ ನೆಲೆಸಿದಳು.

ಜಿತ್ವಾಚಾರ್ಯಃ ಸದಾರಂ ಯತಿಮಜಮತನೋನ್ಮಂದನಾಖ್ಯಂ ಸುರೇಶಂ ।
ಭಾರತ್ಯಾ ಶ್ಚೋಭಯಾದೇಃ ಶ್ರುತವೃತವಸತೇರ್ದಕ್ಷಿಣಾಮ್ನಾಯ ಪೀಠೇ ।
ಬಧ್ನನ್ ಯಾನಂ ಸುದೌರ್ಗಾದನುವೃತಿಮವೃಣೋತ್ ಸಾಪರಾವೃತ್ಯದರ್ಶಂ ।
ದೈವಾತ್ ದೃಷ್ಟ್ವಾಥ ತಸ್ಥಾವಧಿತಟಮಿದ ಯಾ ಶಾರದಾಂಬಾ ಸುಮಸ್ತಾಮ್ ॥

ಶ್ರೀ ಶಂಕರಾಚಾರ್ಯರು ಪುನಃ ಪುನಃ ಪ್ರಾರ್ಥಿಸಿಕೊಂಡದ್ದರಿಂದ, ಶ್ರೀಶಾರದೆಯು ಅವರೊಡನೆ ಶೃಂಗೇರಿಗೆ ತೆರಳಿದಳು. ಶ್ರೀಕೂಡಲೀ ಕ್ಷೇತ್ರದಲ್ಲಿ ಶ್ರೀಶಾರದೆಯು ನಿಂತ ಗುರುತಿಗಾಗಿ, ಅಲ್ಲಿ ಶ್ರೀಚಕ್ರವನ್ನು ಸ್ಥಾಪಿಸಿ, ಅದರಲ್ಲಿ ಶ್ರೀಶಾರದೆಯನ್ನು ಪ್ರತಿಷ್ಠಾಪಿಸಿದರು. ಕಾಲಾಂತರದಲ್ಲಿ ಆ ಸ್ಥಳದಲ್ಲಿ ನಿಂತ ಭಂಗಿಯಲ್ಲಿರುವ ಶ್ರೀಶಾರದಾ ವಿಗ್ರಹದ ಸ್ಥಾಪನೆಯೂ, ದೇವಾಲಯದ ನಿರ್ಮಾಣವೂ ಆದುವು.

ಶ್ರೀಶಾರದಾ ದೇವಾಲಯಮ್



ಹಂತಾಸ್ನಾತಂ ಧ್ಯಾಯತಾಂ ತ್ವತ್ಪದಾಬ್ಜ ಮುಚ್ಚತಿಷ್ಠ ಮಹತೇ ಸೌಭಗಾಯ ॥



ದೇಗುಲದ ಮುಂದೆ ಇರುವ ಮಹತ್ತರವಾದ ಸೌಭಾಗ್ಯವನ್ನು ನೀಡುವ ದೇವಿ ಪಾದಪದ್ಮಗಳ ದರ್ಶನ.



ವರ್ಣ, ಪದ, ವಾಕ್ಯ, ಅರ್ಥ, ಗದ್ಯ, ಪದ್ಯ ಸ್ವರೂಪಿಣಿಯಾದ ಸರಸ್ವತಿಯ ಸ್ವಾಗತ ಫಲಕದಲ್ಲಿ ಶ್ರೀ ಶಂಕರಭಗವತ್ಪಾದ ವಿರಚಿತ ಧ್ಯಾನ ಶ್ಲೋಕ.

ಕಟಾಕ್ಷೇ ದಯಾರ್ದ್ರಾಂ ಕರೇ ಜ್ಞಾನಮುದ್ರಾಂ
ಕಲಾಭಿರ್ವಿನಿದ್ರಾಂ ಕಲಾಪೈಃ ಸುಭದ್ರಾಮ್ ।
ಪುರಸ್ತ್ರೀಂ ವಿನಿದ್ರಾಂ ಪುರಸ್ತುಂಗಭದ್ರಾಂ
ಭಜೇ ಶಾರದಾಂಬಾಮಜಸ್ರಂ ಮದಂಬಾಮ್ ॥

ದಯಾಮಯ ನೋಟವುಳ್ಳ, ಕೈಯ್ಯಲ್ಲಿ ಜ್ಞಾನಮುದ್ರೆ ಇರುವ, ಕಲಾಸಕ್ತಳಾದ, ಸುಭದ್ರವಾಗಿ ಕಾರ್ಯ ನಿರ್ವಹಿಸುವ, ಸದಾ ಜಾಗರೂಕಳಾದ ತುಂಗಭದ್ರಾ ತೀರದ ಪುರದಲ್ಲಿ ವಾಸಿಸುವ ಶಾರದಾಂಬೆಯನ್ನು ಭಜಿಸುತ್ತಾ, ದೇವಾಲಯದ ಪ್ರವೇಶ. ಮೂರು ಪ್ರತ್ಯೇಕ ಗರ್ಭಗೃಹಗಳಿರುವ ಮಹಿಮಾನ್ವಿತ ಸನ್ನಿಧಾನ. ಶ್ರೀಶಾರದಾಂಬೆಯ ಬಲಭಾಗದಲ್ಲಿ ಶ್ರೀ ಶಂಕರ ಭಗವತ್ಪಾದರ ಅಮೃತ ಶಿಲಾ ಮೂರ್ತಿ. ಎಡಭಾಗದಲ್ಲಿ ಶ್ರೀ ಶಕ್ತಿ ಗಣಪತಿಯ ಕೃಷ್ಣ ಶಿಲಾ ಮೂರ್ತಿ.

ನಿಂತಿರುವ ಭಂಗಿಯಲ್ಲಿರುವ ಶ್ರೀ ಶಾರದಾಂಬೆಯ ದಿವ್ಯ ಸುಂದರ ಮೂರ್ತಿ. ಮುಂದೆ ಶ್ರೀ ಶಂಕರ ಭಗವತ್ಪಾದರಿಂದ ಪ್ರತಿಷ್ಟಿತ ಶ್ರೀಚಕ್ರ.

ಬಿಂದು ತ್ರಿಕೋಣ ವಸುಕೋಣ ದಶಾರಯುಗ್ಮ
ಮನ್ವಶ್ರನಾಗದಳ ಸಂಯುತ ಷೋಡಶಾರಮ್
ವೃತ್ತತ್ರಯಂ ಚ ಧರಣೀ ಸದನತ್ರಯಂ ಚ
ಶ್ರೀಚಕ್ರ ಮೇತದುದಿತಂ ಪರದೇವತಾಯಾಃ ॥

ಮೂಲಾಧಾರಾದಿ ಷಟ್ಚಕ್ರಗಳ ಮೇಲೆ ಇರುವ ಸಹಸ್ರ ದಳ ಕಮಲ ಕರ್ಣಿಕೆಯಲ್ಲಿ ವಿದ್ಯುಲ್ಲೇಖೆಯಂತೆ ಹೊಳೆಯುತ್ತಿರುವ ಅದ್ಭುತ ಶಕ್ತಿ.

ಅನೇಕ ಶ್ರೀ ಶ್ರೀ ವಿದ್ಯೋಪಾಸಕರು ಜಪಾನುಷ್ಟಾನ ಮಾಡಿ ಸಿದ್ಧಿ ಪಡೆದ ಜಾಗ್ರತ ಸ್ಥಳ.

"ಅ" ಕಾರದಿಂದ "ಕ್ಷ" ಕಾರದ ವರೆಗೆ ಸಮಸ್ತ ಅಕ್ಷರಗಳನ್ನು ಅವಯವಗಳಲ್ಲಿ ಹೊಂದಿರುವ ನಿಲುವಾಂಬೆ ಸಾಕ್ಷಾತ್ ಸರಸ್ವತಿ.

ದಿವ್ಯ ದೀಪಗಳ ಕಾಂತಿಯಲ್ಲಿ ಬೆಳಗುತ್ತಿರುವ ಶ್ರೀಶಾರದೆ.

ಸುಂದರ ಕಿರೀಟ, ತೇಜೋಮಯವಾದ ಮುಖದ ಹಣೆಯ ಮೇಲೆ ರಾರಾಜಿಸುತ್ತಿರುವ ಕುಂಕುಮ. ನೀಳ ನಾಸಿಕ, ಉಜ್ವಲವಾದ ದಯೆಯನ್ನು ಸೂಸುವ ಕಣ್ಣುಗಳು, ಮುಗ್ಧ ಮುಗುಳು ನಗೆಯಿಂದ ಕೂಡಿದ

ಆಶ್ವಾಸನೆ ನೀಡುತ್ತಿರುವ ತುಟಿಗಳು, ಕೋಮಲ ಕಂಠ, ಎದೆಯ ಮೇಲೆ ವಿರಾಜಿಸುತ್ತಿರುವ ಸುಂದರ ರಂಗು ರಂಗಿನ ಹೂವಿನ ಹಾರಗಳು. ಕೈಗಳಲ್ಲಿ ಜಗತ್ತಿಗೆ ಮಂಗಳಕರಳಾದ ಮಹಾಲಕ್ಷ್ಮಿಯ ಸಂಕೇತವಾಗಿ ಅಮೃತ ಕಲಶ. ಪರಾವಿದ್ಯೆಯ ಪ್ರತೀಕವಾಗಿರುವ ಪುಸ್ತಕ, ವಿಶ್ವದ ಸ್ಥೂಲರೂಪಕ್ಕೆ ಕಾರಣವಾದ ಬೀಜಗಳನ್ನು ಪ್ರತಿನಿಧಿಸುವ ಜಪಮಾಲೆ, ಗಿರಿಸುತೆಯ ಸಂಕೇತವಾಗಿ ಗಿಳಿ, ಧ್ಯಾನ ಮಾತ್ರದಿಂದ ಮಹತ್ತರ ಸೌಭಾಗ್ಯವನ್ನೀಯುವ ಪಾದಪದ್ಮಗಳೊಂದಿಗೆ ದರ್ಶನವೀಯುತ್ತಿರುವ ಶ್ರೀ ಶಾರದಾಂಬೆ.

ಸರ್ವವ್ಯಾಪ್ತಳೂ, ಸರ್ವಕ್ಲೇಶನಿವಾರಕಳೂ, ಕಾಶ್ಮೀರ ಪುರ ನಿವಾಸಿನಿಯೂ, ಹಂಸ ಗಮನೆಯೂ, ಇಷ್ಟಾರ್ಥ ನೆರವೇರಿಸುವವಳೂ, ಅನುಪಮಳೂ ಆದ ಶ್ರೀ ಶಾರದಾಂಬೆಗೆ ನಮಸ್ಕರಿಸುತ್ತಾ,

ಶ್ರೀಶಾರದಾ ಭುಜಂಗ ಪ್ರಯಾತ ಅಷ್ಟಕಂ

ಸುವಕ್ಷೋಜಕುಂಭಾಂ ಸುಧಾಪೂರ್ಣಕುಂಭಾಂ
ಪ್ರಸಾದಾವಲಂಬಾಂ ಪ್ರಪುಣ್ಯಾವಲಂಬಾಮ್ ।
ಸದಾಸ್ಯೇಂದುಬಿಂಬಾಂ ಸದಾನೋಷ್ಠಬಿಂಬಾಂ
ಭಜೇ ಶಾರದಾಂಬಾಮಜಸ್ರಂ ಮದಂಬಾಮ್ ॥ 1 ॥

ಕಟಾಕ್ಷೇ ದಯಾರ್ದ್ರಾಂ ಕರೇ ಜ್ಞಾನಮುದ್ರಾಂ
ಕಲಾಭಿರ್ವಿನಿದ್ರಾಂ ಕಲಾಪೈಃ ಸುಭದ್ರಾಮ್ ।
ಪುರಸ್ತ್ರೀಂ ವಿನಿದ್ರಾಂ ಪುರಸ್ತುಂಗಭದ್ರಾಂ
ಭಜೇ ಶಾರದಾಂಬಾಮಜಸ್ರಂ ಮದಂಬಾಮ್ ॥ 2 ॥

ಲಲಾಮಾಂಕಫಾಲಾಂ ಲಸದ್ಗಾನಲೋಲಾಂ
ಸ್ವಭಕ್ತೈಕಪಾಲಾಂ ಯಶಃಶ್ರೀಕಪೋಲಾಮ್ ।
ಕರೇ ತ್ವಕ್ಷಮಾಲಾಂ ಕನತ್ಪತ್ರಲೋಲಾಂ
ಭಜೇ ಶಾರದಾಂಬಾಮಜಸ್ರಂ ಮದಂಬಾಮ್ ॥ 3 ॥

ಸುಸೀಮಂತವೇಣೀಂ ದೃಶಾ ನಿರ್ಜಿತೈಣೀಂ
ರಮತ್ಕೀರವಾಣೀಂ ನಮದ್ವಜ್ರಪಾಣೀಮ್ ।
ಸುಧಾಮಂಥರಾಸ್ಯಾಂ ಮುದಾ ಚಿಂತ್ಯವೇಣೀಂ
ಭಜೇ ಶಾರದಾಂಬಾಮಜಸ್ರಂ ಮದಂಬಾಮ್ ॥ 4 ॥

ಸುಶಾಂತಾಂ ಸುದೇಹಾಂ ದೃಗಂತೇ ಕಚಾಂತಾಂ

ಲಸತ್ಸಲ್ಲತಾಂಗೀಮನಂತಾಮಚಿಂತ್ಯಾಮ್ ।

ಸ್ಮರೇತ್ತಾಪಸೈಃ ಸರ್ಗಪೂರ್ವಸ್ಥಿತಾಂ ತಾಂ

ಭಜೇ ಶಾರದಾಂಬಾಮಜಸ್ರಂ ಮದಂಬಾಮ್ ॥ 5 ॥

ಕುರಂಗೇ ತುರಂಗೇ ಮೃಗೇಂದ್ರೇ ಖಗೇಂದ್ರೇ

ಮರಾಲೇ ಮದೇಭೇ ಮಹೋಕ್ಷೇಽಧಿರೂಢಾಮ್ ।

ಮಹತ್ಯಾಂ ನವಮ್ಯಾಂ ಸದಾ ಸಾಮರೂಪಾಂ

ಭಜೇ ಶಾರದಾಂಬಾಮಜಸ್ರಂ ಮದಂಬಾಮ್ ॥ 6 ॥

ಜ್ವಲತ್ಕಾಂತಿವಹ್ನಿಂ ಜಗನ್ಮೋಹನಾಂಗೀಂ

ಭಜೇ ಮಾನಸಾಂಭೋಜ ಸುಭ್ರಾಂತಭೃಂಗೀಮ್ ।

ನಿಜಸ್ತೋತ್ರಸಂಗೀತನೃತ್ಯಪ್ರಭಾಂಗೀಂ

ಭಜೇ ಶಾರದಾಂಬಾಮಜಸ್ರಂ ಮದಂಬಾಮ್ ॥ 7 ॥

ಭವಾಂಭೋಜನೇತ್ರಾಜಸಂಪೂಜ್ಯಮಾನಾಂ

ಲಸನ್ಮಂದಹಾಸಪ್ರಭಾವಕ್ತ್ರಚಿಹ್ನಾಮ್ ।

ಚಲಚ್ಚಂಚಲಾಚಾರುತಾಟಂಕಕರ್ಣಾಂ

ಭಜೇ ಶಾರದಾಂಬಾಮಜಸ್ರಂ ಮದಂಬಾಮ್ ॥ 8 ॥

ಇತಿ ಶ್ರೀ ಶಾರದಾ ಭುಜಂಗ ಪ್ರಯಾತಾಷ್ಟಕಮ್ ।

ಶ್ರೀಶಾರದಾ ಪ್ರಾರ್ಥನಾ

ನಮಸ್ತೇ ಶಾರದೇ ದೇವಿ ಕಾಶ್ಮೀರಪುರವಾಸಿನಿ

ತ್ವಾಮಹಂ ಪ್ರಾರ್ಥಯೇ ನಿತ್ಯಂ ವಿದ್ಯಾದಾನಂ ಚ ದೇಹಿ ಮೇ ||

ಯಾ ಶ್ರದ್ಧಾ ಧಾರಣಾ ಮೇಧಾ ವಾಗ್ದೇವೀ ವಿಧಿವಲ್ಲಭಾ

ಭಕ್ತಜಿಹ್ವಾಗ್ರಸದನಾ ಶಮಾದಿಗುಣದಾಯಿನೀ || ೧ ||

ನಮಾಮಿ ಯಾಮಿನೀಂ ನಾಥಲೇಖಾಲಂಕೃತಕುಂತಲಾಮ್

ಭವಾನೀಂ ಭವಸಂತಾಪನಿರ್ವಾಪಣಸುಧಾನದೀಮ್ || ೨ ||

ಭದ್ರಕಾಳ್ಯೈ ನಮೋ ನಿತ್ಯಂ ಸರಸ್ವತ್ಯೈ ನಮೋ ನಮಃ

ವೇದವೇದಾಂಗವೇದಾಂತವಿದ್ಯಾಸ್ಥಾನೇಭ್ಯ ಏವ ಚ || ४ ||

ಬ್ರಹ್ಮಸ್ವರೂಪಾ ಪರಮಾ ಜ್ಯೋತಿರೂಪಾ ಸನಾತನೀ

ಸರ್ವವಿದ್ಯಾಧಿದೇವೀ ಯಾ ತಸ್ಯೈ ವಾಣ್ಯೈ ನಮೋ ನಮಃ || ೫ ||

ಯಯಾ ವಿನಾ ಜಗತ್ಸರ್ವಂ ಶಶ್ವಜ್ಜೀವನ್ಮೃತಂ ಭವೇತ್

ಜ್ಞಾನಾಧಿದೇವೀ ಯಾ ತಸ್ಯೈ ಸರಸ್ವತ್ಯೈ ನಮೋ ನಮಃ || ೬ ||

ಯಯಾ ವಿನಾ ಜಗತ್ಸರ್ವಂ ಮೂಕಮುನ್ಮತ್ತವತ್ಸದಾ

ಯಾ ದೇವೀ ವಾಗಧಿಷ್ಠಾತ್ರೀ ತಸ್ಯೈ ವಾಣ್ಯೈ ನಮೋ ನಮಃ || ೭ ||

ಸರಸ್ವತೀ ತೀರ್ಥ, ಶಕ್ತಿ ತೀರ್ಥ, ಶಂಖ ತೀರ್ಥ, ಶ್ರೀ ನರಸಿಂಹ ತೀರ್ಥ ಮುಂತಾದ ಮಹಿಮಾನ್ವಿತ ತೀರ್ಥಗಳಿರುವ, ಏಕಾದಶ ರುದ್ರಕ್ಷೇತ್ರಗಳನ್ನೊಳಗೊಂಡಿರುವ, ಮಹಾ ಮಹಿಮರಾದ ಯತಿವರ್ಯರ ಪವಿತ್ರ ವೃಂದಾವನಗಳಿರುವ, ಪೌರಾಣಿಕವಾಗಿ, ಐತಿಹಾಸಿಕವಾಗಿ, ಧಾರ್ಮಿಕವಾಗಿ, ಶಿಲ್ಪಕಳಾ ತಾಣವಾಗಿ, ಮಹಿಮಾನ್ವಿತ ಸ್ಥಳವಾಗಿ ಇರುವ ಶ್ರೀ ಕೂಡಲೀ ಕ್ಷೇತ್ರದ ಪುನರ್ದರ್ಶನ ಭಾಗ್ಯವನ್ನು ನಮಗೆಲ್ಲಾ ನೀಡಲಿ ಎಂದು ಜಗದಂಬೆಯನ್ನು ಪ್ರಾರ್ಥಿಸುತ್ತಾ, ದೇವಿ ಸರಸ್ವತಿಯು ನಮ್ಮ ಹೃದಯ ಮಂದಿರದಲ್ಲಿ ನೆಲೆಸಿ, ನಮ್ಮನ್ನು ಸನ್ಮಾರ್ಗದಲ್ಲಿ ನಡೆಸಲಿ ಎಂದು ಮೊರೆಯಿಡುತ್ತಾ, ಶ್ರೀಶಾರದೆಯ ಪಾದಪದ್ಮಗಳಿಗೆ ನಮನ.

॥ ಜಗದಂಬಾರ್ಪಣಮಸ್ತು ॥



